ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 4 ಮತ್ತು 5ನೇ ಪ್ರತಿವಾದಿಗಳ ಪರ ಶ್ರೀ ಎ.ಎಸ್ ವಕೀಲರಿಂದಃ

ನಾನು ಕಳೆದ ಬಾರಿ ನ್ಯಾಯಾಲಯಕ್ಕೆ ಯಾವ ಯಾವ ದಾಖಲೆಗಳನ್ನು ಹಾಜರು ಮಾಡಿದ್ದೆ ಎಂದು ನನಗೆ ಗೊತ್ತಿದೆ. ನಾನು, 4 ಮತ್ತು 5ನೇ ಪ್ರತಿವಾದಿಗಳು ಎ.ಸಿ ನ್ಯಾಯಾಲಯದ ಮುಂದೆ ಸಲ್ಲಿಸಿದ ಅರ್ಜಿಗಳ ಪ್ರತಿಗಳು ಹಾಗೂ ತಹಶೀಲ್ದಾರರು ಮಾಡಿದ ಆದೇಶದ ಪ್ರತಿ, ಮಾಗಡಿಯ ಸಿವಿಲ್ ನ್ಯಾಯಾಲಯದಲ್ಲಿ 5ನೇ ಪ್ರತಿವಾದಿ ಬೇರೆಯವರ ಮೇಲೆ ಸಲ್ಲಿಸಿದ್ದ ಪ್ರಕರಣದಲ್ಲಿ ಕೊಟ್ಟ ಹೇಳಿಕೆಯ ಪ್ರತಿಗಳನ್ನು ಹಾಜರು ಮಾಡಿದ್ದೆ. ರಾಮಕೃಷ್ಣಪ್ಪನವರು ಕೊಟ್ಟ ಹೇಳಿಕೆಯ ಪ್ರತಿಯನ್ನು ಹಾಜರು ಮಾಡಿದ್ದೇನೆ. ಚೆನ್ನಪ್ಪ ನನ್ನ ವಿರುದ್ಧ ಸಲ್ಲಿಸಿದ್ದ ಪ್ರಕರಣದಲ್ಲಿ ಈ ದಾವೆಯ 5ನೇ ಪ್ರತಿವಾದಿ ನನ್ನ ವಿರುದ್ಧ ಕೊಟ್ಟ ಸಾಕ್ಷಿ ಹೇಳಿಕೆಯ ಪ್ರತಿಯನ್ನು ಹಾಜರು ಮಾಡಿದ್ದೆ. ಈ ಎಲ್ಲಾ ದಾಖಲೆಗಳು ನನ್ನ ಬಳಿ ಇದ್ದವು. ಸಾಕ್ಷಿಯು ಪುನಃ ನನ್ನ ಮನೆಯಲ್ಲಿದ್ದವು ಎಂದು ನುಡಿಯುತ್ತಾರೆ. ಎ.ಸಿ ಹಾಗೂ ತಹಶೀಲ್ದಾರ್ ನ್ಯಾಯಾಲಯಗಳಿಂದ ದಾಖಲೆಗಳನ್ನು ನಾನೇ ಪಡೆದುಕೊಂಡಿದ್ದೆ. ಸದರಿ ದಾಖಲೆಗಳನ್ನು ನಾನು ಅಂದಾಜು ಯಾವಾಗ ಪಡೆದುಕೊಂಡಿದ್ದೆ ಎಂದರೆ ನನಗೆ ತಾರೀಖು ಹೇಳಲು ತಿಳಿಯುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದಾಗ ಸದರಿ ದಾಖಲೆಗಳು ನನ್ನ ಮನೆಯಲ್ಲಿದ್ದವು. ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದಾಗಲೇ ಮೇಲೆ ಹೇಳಿದ ದಾಖಲೆಗಳನ್ನು ಹಾಜರು ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ.

ದಿನಾಂಕ ಃ 17.03.2021

ಓ.ಎಸ್ ನಂ.84/2006 ರಲ್ಲಿ
ಪಿ.ಡಬ್ಲ್ಯೂ-1(ಹೆಂಜಾರಯ್ಯ)

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.